# ವಾಟ್ಸ್ಆ್ಯಪ್‌ನಲ್ಲಿ ಹೀಗೆ ಮಾಡದಿರಿ

■ **ಶಶಿಕುಮಾರ್ ಸಿ.**



ವಾಟ್ಸ್ಆ್ಯಪ್ ಎಲ್ಲರ ನೆಚ್ಚಿನ ಮೆಸೇಜಿಂಗ್ ಆ್ಯಪ್. ವೈಯಕ್ತಿಕದಿಂದ ಹಿಡಿದು ಕಚೇರಿ ಕಾರ್ಯಗಳವರೆಗೂ ವಿಶ್ವದಾದ್ಯಂತ ಹೆಚ್ಚಿನ ಸಂಖ್ಯೆಯ ಜನರು ಬಳಸುವ ಸಂವಹನ ಸಾಧನವಿದು. ಹೆಚ್ಚು ಮಂದಿ ಈ ಆ್ಯಪ್ ಅನ್ನು ಬಳಸುತ್ತಿರುವುದು ಹ್ಯಾಕರ್ಸ್‌ಗಳ ಕಣ್ಣು ಇತ್ತ ಬೀಳುವಂತೆ ಮಾಡಿದೆ. ಮುಗ್ಧ ಜನರನ್ನು ಪುಸಲಾಯಿಸುವ ಹ್ಯಾಕರ್ಸ್‌ಗಳು, ಅವರಿಂದ ಬ್ಯಾಂಕಿನ ಮಾಹಿತಿ ಹಾಗೂ ಒಟಿಪಿಯಂತಹ ರಹಸ್ಯ ವಿವರಗಳನ್ನು ಪಡೆದು ಬ್ಯಾಂಕ್ ಖಾತೆಯಿಂದ ಹಣವನ್ನು ವರ್ಗಾವಣೆ ಮಾಡಿ ವಂಚಿಸುತ್ತಿದ್ದಾರೆ.

ಈಚೆಗೆ ಕೆಲ ಬ್ಯಾಂಕುಗಳ ಹೆಸರಿನಲ್ಲಿ ಜನರಿಗೆ ವಾಟ್ಸ್ಆ್ಯಪ್ ಸಂದೇಶ ಕಳುಹಿಸಿ ಒಟಿಪಿ ಪಡೆದು ಹಣವನ್ನು ವರ್ಗಾವಣೆ ಮಾಡಿಕೊಂಡ ಪ್ರಕರಣಗಳ ಬೆಳಕಿಗೆ ಬಂದಿದ್ದವು. ಇದರಿಂದ ಎಚ್ಚೆತ್ತುಕೊಂಡ ಬ್ಯಾಂಕುಗಳು, ಒಟಿಪಿಯನ್ನು ವಾಟ್ಸ್ಆ್ಯಪ್ ಮೂಲಕ ಹಂಚಿಕೊಳ್ಳದಂತೆ ತನ್ನ ಖಾತೆದಾರರಿಗೆ ಎಚ್ಚರಿಕೆ ನೀಡಿವೆ. ಆದರೂ ಇಂಟರ್‌ನೆಟ್ ಬ್ಯಾಂಕಿಂಗ್ ವಂಚನೆಯಂತಹ ಪ್ರಕರಣಗಳು ಹೆಚ್ಚಾಗುತ್ತಲೇ ಇವೆ.

ಹೀಗಾಗಿ, ಇಂಟರ್‌ನೆಟ್ ಬ್ಯಾಂಕಿಂಗ್ ವಂಚನೆಯ ಬಲೆಯಲ್ಲಿ ನೀವು ಬೀಳದಂತೆ ಎಚ್ಚರವಹಿಸಲು ಕೆಲ ಸರಳ ಟಿಪ್ಸ್‌ಗಳು ಇಲ್ಲಿವೆ. ಅವುಗಳೆಂದರೆ,

- ಬ್ಯಾಂಕ್ ವಿವರ, ಡೆಬಿಟ್/ಕ್ರೆಡಿಟ್ ಕಾರ್ಡುಗಳ ಪಿನ್ ಅಥವಾ ಇಂಟರ್‌ನೆಟ್ ಬ್ಯಾಂಕಿಂಗ್ ಪಾಸ್‌ವರ್ಡ್‌ಗಳನ್ನು ವಾಟ್ಸ್ಆ್ಯಪ್‌ನಲ್ಲಿ ಹಂಚಿಕೊಳ್ಳುವುದನ್ನು ನಿಲ್ಲಿಸಿ.
- ಒಟಿಪಿ ಬಯಸಿ ಬರುವ ವಾಟ್ಸ್ಆ್ಯಪ್ ಸಂದೇಶಗಳನ್ನು ನಿರ್ಲಕ್ಷಿಸಿ. ಅಂತಹ ನಂಬರ್‌ಗಳನ್ನು ಬ್ಲಾಕ್‌ಲಿಸ್ಟ್‌ಗೆ ಹಾಕಿ.
- ಗೊತ್ತಿಲ್ಲದ ಮೊಬೈಲ್ ಸಂಖ್ಯೆಯಿಂದ ಬರುವ ಫೈಲ್‌ಗಳನ್ನು ಡೌನ್‌ಲೋಡ್ ಮಾಡದಿರಿ ಮತ್ತು ಲಿಂಕ್‌ಗಳನ್ನು ಕ್ಲಿಕ್ಕಿಸದಿರಿ. ಕರೆಗಳನ್ನು ಸ್ವೀಕರಿಸದಿರಿ.
- ನಿಮ್ಮ ಮೊಬೈಲ್ ಕಳೆದುಹೋಗಿದ್ದಲ್ಲಿ ತಕ್ಷಣವೇ ನಿಮ್ಮ ವಾಟ್ಸ್ಆ್ಯಪ್ ಖಾತೆಯನ್ನು ಡಿಲೀಟ್ ಮಾಡಿ.
- ನಿಮ್ಮ ಮೊಬೈಲ್‌ಗಳನ್ನು ಮರು ಮಾರಾಟ ಮಾಡುವಾಗ ಅದರಲ್ಲಿನ ವಾಟ್ಸ್ಆ್ಯಪ್ ಸಂದೇಶ ಮತ್ತು ಅಗತ್ಯ ಮಾಹಿತಿಗಳ ಫೈಲ್‌ಗಳ ಡಾಟಾವನ್ನು ಡಿಲೀಟ್ ಮಾಡಿ. ಆ್ಯಪ್‌ನಲ್ಲಿನ ಸೆಟ್ಟಿಂಗ್ಸ್‌ಗೆ ಹೋಗಿ ಅಲ್ಲಿ ಕಾಣುವ ಡಾಟಾ ಆ್ಯಂಡ್ ರೀಸ್ಟೋರ್ ಫ್ಯಾಕ್ಟರಿ ಆಯ್ಕೆಯನ್ನು ಕ್ಲಿಕ್ಕಿಸಿ ಡಾಟಾವನ್ನು ಡಿಲೀಟ್ ಮಾಡಿ.
- ವಾಟ್ಸ್ಆ್ಯಪ್ ಹೆಸರಿನಲ್ಲಿ ಬರುವ ಕರೆಗಳಿಗೆ ಸ್ಪಂದಿಸದಿರಿ. ಏಕೆಂದರೆ ಬಳಕೆದಾರರನ್ನು ಕಂಪನಿಯು ವಾಟ್ಸ್ಆ್ಯಪ್ ಮೂಲಕ ಸಂಪರ್ಕಿಸುವುದಿಲ್ಲ. 'ಉಚಿತ ಚಂದಾದಾರಿಕೆಯನ್ನು ವಾಟ್ಸ್ಆ್ಯಪ್ ನೀಡುತ್ತಿದೆ' ಎಂಬಂತಹ ಇತರ ಸಂದೇಶಗಳು ಬಂದರೆ ಅದು ಖಂಡಿತ ಮೋಸಗಾರರು ಬೀಸಿದ ಬಲೆಯೆಂದು ಭಾವಿಸಿ.
- ಆಟೋಮ್ಯಾಟಿಕ್ ಡೌನ್‌ಲೋಡ್ ಆಯ್ಕೆಯನ್ನು ಡಿಸೇಬಲ್ ಮಾಡಿ.
- ಸಾರ್ವಜನಿಕ ವೈ–ಫೈ ನೆಟ್‌ವರ್ಕ್‌ಗಳ ಮೂಲಕ ನಿಮ್ಮ ಡಿವೈಸ್ ಕನೆಕ್ಟ್ ಆಗಿದ್ದಾಗ ವಾಟ್ಸ್ಆ್ಯಪ್ ಅನ್ನು ಉಪಯೋಗಿಸದಿರಿ. ■

## ಕಡೆಗೂ ಬಂತು ವಾಟ್ಸ್ಆ್ಯಪ್ ಡಾರ್ಕ್‌ಮೋಡ್!




ಡಾರ್ಕ್‌ಮೋಡ್ ಆಯ್ಕೆ ಸ್ಮಾರ್ಟ್‌ಫೋನ್‌ಗಳಿಗೆ ಲಗ್ಗೆಯಿಟ್ಟು ವರ್ಷಗಳೇ ಕಳೆದಿದ್ದು, ಅಂದಿನಿಂದ 'ತಾನೂ ಡಾರ್ಕ್‌ಮೋಡ್ ಫೀಚರ್ ಪರಿಚಯಿಸುವೆ' ಎನ್ನುತ್ತಿದ್ದ ವಾಟ್ಸ್ಆ್ಯಪ್ ಕಡೆಗೂ ಈ ಆಯ್ಕೆಯನ್ನು ಆ್ಯಂಡ್ರಾಯ್ಡ್ ಸ್ಮಾರ್ಟ್‌ಫೋನ್ ಬಳಕೆದಾರರಿಗೆ ಒದಗಿಸಿದೆ.

ಕೆಲ ತಿಂಗಳುಗಳ ಹಿಂದೆಯಷ್ಟೇ ಐಒಎಸ್ ಸ್ಮಾರ್ಟ್‌ಫೋನ್‌ಗಳ ವಾಟ್ಸ್ಆ್ಯಪ್ ಬಳಕೆದಾರರಿಗೆ ಮಾತ್ರ ಡಾರ್ಕ್‌ಮೋಡ್ ಆಯ್ಕೆಯನ್ನು ಪರಿಚಯಿಸಿದ್ದ ವಾಟ್ಸ್ಆ್ಯಪ್, ಆ್ಯಂಡ್ರಾಯ್ಡ್ ಸೇರಿದಂತೆ ಇನ್ನಿತರ ಆಪರೇಟಿಂಗ್ ಸಿಸ್ಟಂ (ಒಎಸ್) ಆಧಾರಿತ ಸ್ಮಾರ್ಟ್‌ಫೋನ್‌ಗಳಿಗೆ ಈ ಆಯ್ಕೆಯನ್ನು ಕಲ್ಪಿಸಿರಲಿಲ್ಲ.

### ಸೆಟ್ಟಿಂಗ್ಸ್ ಹೇಗೆ?

ವಾಟ್ಸ್ಆ್ಯಪ್‌ನ ಲೈಟ್‌ಮೋಡ್ ಆಯ್ಕೆಯಿಂದ ಕಣ್ಣಿಗೆ ಒತ್ತಡ ಹೆಚ್ಚಾಗುತ್ತದೆ. ಅದು ಭವಿಷ್ಯದಲ್ಲಿ ಅಪಾಯವಾಗಬಹುದು. ಆದರೆ, ಡಾರ್ಕ್ ಮೋಡ್ ಆಯ್ಕೆಯು ಕಣ್ಣಿಗೆ ಅಷ್ಟೇನೂ ಹಾನಿ ಮಾಡದು. ಕಣ್ಣಿಗೆ ಹಿತಕರವಾದ ಅನುಭವ ನೀಡುತ್ತದೆ. ಹೀಗಾಗಿಯೇ ವಾಟ್ಸ್ಆ್ಯಪ್ ಬಳಕೆದಾರರು ಡಾರ್ಕ್‌ಮೋಡ್‌ಗೆ ಬೇಡಿಕೆಯಿಟ್ಟಿದ್ದರು.

ಲೈಟ್‌ಮೋಡ್‌ನ ವಾಟ್ಸ್ಆ್ಯಪ್ ಬಳಕೆ ಮಾಡುತ್ತಿರುವವರು ವಾಟ್ಸ್ಆ್ಯಪ್ ತೆರೆದು ಸೆಟ್ಟಿಂಗ್ಸ್‌ಗೆ ಹೋಗಿ. ಬಳಿಕ ಚಾಟ್ಸ್ ಆಯ್ಕೆಯ ಮೇಲೆ ಕ್ಲಿಕ್ಕಿಸಿ. ಡಿಸ್‌ಪ್ಲೇ ಆಯ್ಕೆಯ ಕೆಳಗಡೆ ಕಾಣುವ 'ಥೀಮ್' ಮೇಲೆ ಕ್ಲಿಕ್ಕಿಸಿದರೆ 'ಸಿಸ್ಟಂ ಡೀಫಾಲ್ಟ್', 'ಲೈಟ್' ಮತ್ತು 'ಡಾರ್ಕ್' ಎಂಬ ಮೂರು ಆಯ್ಕೆಗಳು ಕಾಣುತ್ತವೆ. ಆ ಪೈಕಿ 'ಡಾರ್ಕ್' ಆಯ್ಕೆಯನ್ನು ಕ್ಲಿಕ್ಕಿಸಿದರೆ ನಿಮ್ಮ ಇಡೀ ವಾಟ್ಸ್ಆ್ಯಪ್ ಡಾರ್ಕ್‌ಮಯವಾಗಲಿದೆ. ಅದಕ್ಕೂ ಮುಂಚೆ ನಿಮ್ಮ ವಾಟ್ಸ್ಆ್ಯಪ್ ಅನ್ನು ಗೂಗಲ್ ಪ್ಲೇ ಸ್ಟೋರ್‌ಗೆ ಹೋಗಿ ಅಪ್‌ಡೇಟ್ ಮಾಡಿಕೊಳ್ಳುವುದು ಕಡ್ಡಾಯ. ■